**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಉಮೇಶ್ | ಫ್ರಾಸಾ-2 |
| ತಂದೆಯ ಹೆಸರು | : ಬೋಜಯ್ಯ | ಚಾಸಾ-3 |
| ವಯಸ್ಸು | : 35 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 13.08.2025 |
| ವಾಸಸ್ಥಳ | : ಬೆಟ್ಟದ ಮಳಲಿ | |

**:ಮುಖ್ಯ ವಿಚಾರಣೆ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 1, 3 ಮತ್ತು 5 ನೇ ಆರೋಪಿತರ ಪರಿಚಯ ನನಗಿಲ್ಲ. 2 ಮತ್ತು 4 ನೇ ಆರೋಪಿತರು ಪರಿಚಯವೂ ಸಹಾ ನನಗಿಲ್ಲ. ಸದರಿ ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸುತ್ತಾರೆ. ಚಾಸಾ-1 ಮತ್ತು 2 ರವರು ನನ್ನೊಂದಿಗೆ ಕೆಲಸ ಮಾಡುತ್ತಾರೆ. ಚಾಸಾ-4 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ ಒಂದು ಪೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ನಿಪಿ-2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಹಾಗೂ ಪೋಟೋವನ್ನು ನಿಪಿ-12 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಶರ್ಟ್ ಮತ್ತು ಒಂದು ಪ್ಯಾಂಟ್ ನ ಮೇಲೆ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಎಂ.ಒ.3 ಮತ್ತು 4, ಸಾಕ್ಷಿಯ ಸಹಿಗಳನ್ನು ಎಂ.ಒ.3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು.

1 ½ ವರ್ಷದ ಹಿಂದೆ ನಾನು, ಚಾಸಾ-1 ಮತ್ತು 2 ರವರು ಚಾಸಾ-1 ರವರ ಕಾರಿನಲ್ಲಿ ಒಂದು ತೋಟದ ಕೆಲಸಕ್ಕೆಂದು ಹೋಗಿ ಬರುವಾಗ ನಾವು ಬಿದ್ದು ಪೆಟ್ಟು ಮಾಡಿಕೊಂಡ ಕಾರಣ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೋಲಿಸರು ನಮ್ಮ ಸಹಿಗಳನ್ನು ಪಡೆದು ಅದಾದ ಸ್ವಲ್ಪ ದಿನದ ನಂತರ ನಮಗೆ ಪೆಟ್ಟಾಗಿದ್ದಾಗ ಧರಿಸಿದ್ದ ಬಟ್ಟೆಯನ್ನು ಪೋಲಿಸರು ಠಾಣೆಗೆ ತರಿಸಿಕೊಂಡು ಅಲ್ಲಿಯೂ ಸಹಾ ನಮ್ಮ ಸಹಿಗಳನ್ನು ಹಾಗೂ ಪೋಟೋಗಳನ್ನು ತೆಗೆದಿರುತ್ತಾರೆ. ಯಾವ ವಿಚಾರಕ್ಕೆ ನನ್ನ ಸಹಿಗಳನ್ನು ಪಡೆದು ಪೋಟೋಗಳನ್ನು ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಯ ವಿರುದ್ಧ ದೂರು ಕೊಟ್ಟಿಲ್ಲ, ಪೋಲಿಸರು ನನ್ನ ಬಟ್ಟೆಯನ್ನು ಯಾಕೆ ಪಡೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಫ್ರಾಜ್ಞ್ಯಾಸ.ಸ.ಅ. ರವರಿಂದ:</u>**

ಈಗ ಓದಿ ಹೇಳಿದಂತೆ ದಿ.19.09.2023 ರಂದು ಬಾಳೂರು ಪೋಲಿಸರ ಮುಂದೆ ನನ್ನ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.</u>**
**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.1/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಶರತ್ | ಫ್ರಾಸಾ-1 |
| ತಂದೆಯ ಹೆಸರು | : ರುದ್ರಯ್ಯ | ಚಾಸಾ-1 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 13.08.2025 |
| ವಾಸಸ್ಥಳ | : ಬೆಟ್ಟದ ಮಳಲಿ | |

**<u>:ಮುಖ್ಯ ವಿಚಾರಣೆ ಫ್ರಾಜ್ಞ್ಯಾಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ 1, 3 ಮತ್ತು 5 ನೇ ಆರೋಪಿತರ ಪರಿಚಯ ನನಗಿಲ್ಲ. 2 ಮತ್ತು 4 ನೇ ಆರೋಪಿತರು ಪರಿಚಯವೂ ಸಹಾ ನನಗಿಲ್ಲ. ಸದರಿ ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸುತ್ತಾರೆ. ಚಾಸಾ-2 ಮತ್ತು 3 ರವರು ನನ್ನೊಂದಿಗೆ ಕೆಲಸ ಮಾಡುತ್ತಾರೆ. ಚಾಸಾ-4 ರವರ ಪರಿಚಯ ನನಗಿದೆ.

ಸಾಕ್ಷಿಯು ದಿ.18.09.2023 ರ ದೂರು ಹೇಳಿಕೆ, ದಿ.18.09.2023 ರ ಅಮಾನತ್ತು ಮಹಜರ್, ಸದರಿ ಮಹಜರ್ ಗೆ ಅಡಕಗೊಂಡ ಒಂದು ಪೋಟೋ, ದಿ.12.10.2023 ರ ವಾಹನ ಬಿಡುಗಡೆ ಮಹಜರ್ ಮತ್ತು ಅದಕ್ಕೆ ಅಡಕಗೊಂಡ ನಾಲ್ಕು ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸಿದ್ದು, ಸದರಿ ದಾಖಲೆಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-1 ರಿಂದ 10, ಸಾಕ್ಷಿಯ ಸಹಿಗಳನ್ನು ನಿಪಿ-1(ಎ), 2(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಶರ್ಟ್ ಮತ್ತು ಒಂದು ಪ್ಯಾಂಟ್ ನ ಮೇಲೆ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಎಂ.ಒ.1 ಮತ್ತು 2, ಸಾಕ್ಷಿಯ ಸಹಿಗಳನ್ನು ಎಂ.ಒ.1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

1 ½ ವರ್ಷದ ಹಿಂದೆ ನಾನು, ಚಾಸಾ-2 ಮತ್ತು 3 ರವರು ನನ್ನ ಕಾರಿನಲ್ಲಿ ಒಂದು ತೋಟದ ಕೆಲಸಕ್ಕೆಂದು ಹೋಗಿ ಬರುವಾಗ ನಾವು ಬಿದ್ದು ಪೆಟ್ಟು ಮಾಡಿಕೊಂಡ ಕಾರಣ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೋಲಿಸರು ನಮ್ಮ ಸಹಿಗಳನ್ನು ಪಡೆದು ಅದಾದ ಸ್ವಲ್ಪ ದಿನದ ನಂತರ ನನ್ನ ಕಾರು ಮತ್ತು ನಮಗೆ ಪೆಟ್ಟಾಗಿದ್ದಾಗ ಧರಿಸಿದ್ದ ಬಟ್ಟೆಯನ್ನು ಪೋಲಿಸರು ಠಾಣೆಗೆ ತರಿಸಿಕೊಂಡು ಅಲ್ಲಿಯೂ ಸಹಾ ನಮ್ಮ ಸಹಿಗಳನ್ನು ಹಾಗೂ ಪೋಟೋಗಳನ್ನು ತೆಗೆದಿರುತ್ತಾರೆ. ಯಾವ ವಿಚಾರಕ್ಕೆ ನನ್ನ ಸಹಿಗಳನ್ನು ಪಡೆದು ಪೋಟೋಗಳನ್ನು ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಯ ವಿರುದ್ದ ದೂರು ಕೊಟ್ಟಿಲ್ಲ, ಪೋಲಿಸರು ನನ್ನ ವಾಹನ ಮತ್ತು ಬಟ್ಟೆಯನ್ನು ಯಾಕೆ ಪಡೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-1, 2 ಮತ್ತು 4 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಫ್ರಾಜ್ಞಾಸ.ಸ.ಅ. ರವರಿಂದ:</u>**

ಸಾಕ್ಷಿಗೆ ನಿಪಿ-1, 2 ಮತ್ತು 4 ರಲ್ಲಿರುವ ಸಂಪೂರ್ಣ ವಿವರವನ್ನು ಓದಿ ಹೇಳಿದ್ದು ಆ ವಿವರಗಳನ್ನು ಸಾಕ್ಷಿಯು ಸಂಪೂರ್ಣವಾಗಿ ಅಲ್ಲಗಳೆಯುತ್ತಾರೆ. ನಾನು ಆರೋಪಿಯ ವಿರುದ್ಧ ದೂರು ದಾಖಲಿಸಿ ಪೋಲಿಸರಿಗೆ ನನ್ನ ವಾಹನವನ್ನು ಆರೋಪಿತರು ಅಡ್ಡಗಟ್ಟಿದ್ದರು ಎಂದು ಹಾಜರುಪಡಿಸಿ ನ್ಯಾಯಾಲಯದ ಮುಂದೆ ನೋಡುತ್ತಿರುವ ಎಂ.ಒ.1 ಮತ್ತು 2 ರ ಬಟ್ಟೆಗಳನ್ನು ಆರೋಪಿತರು ನಮಗೆ ಹಲ್ಲೆ ಮಾಡುವಾಗ ಧರಿಸಿದದ್ದಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ದಿ.19.09.2023 ರಂದು ಬಾಳೂರು ಪೋಲಿಸರ ಮುಂದೆ ನನ್ನ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-11 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.</u>**
**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ**.,** ಮೂಡಿಗೆರೆ.